ನನ್ನ ಓದು

# ಅವರ ಭಾರತದ ಸಂಭ್ರಮ ಇವಳ ಭಾರತದ ವಿಷಾದ



ಎಂ.ಎಸ್. ಆಶಾದೇವಿ

ಹದಿನೈದು ಇಪ್ಪತ್ತು ವರ್ಷಗಳ ಹಿಂದೆ ಶಿವಮೊಗ್ಗದಲ್ಲಿ ನಡೆದ ವಿಚಾರ ಸಂಕಿರಣವೊಂದರಲ್ಲಿ, 'ಹೆಣ್ಣುಮಕ್ಕಳ ಪಾಡು ಏಸುಕ್ರಿಸ್ತನಂತೆ, ನಮ್ಮ ಶಿಲುಬೆಯನ್ನು ನಾವೇ ಹೊರಬೇಕು' ಎನ್ನುವ ಮಾತುಗಳನ್ನಾಡಿದೆ. ಆಡುವಾಗ ನನ್ನ ಮನಸ್ಸಿನಲ್ಲಿ ಇದ್ದದ್ದು, ಸಾಮಾಜಿಕ ಹೊಣೆಗಾರಿಕೆಯ ಅಂಗವಾಗಿಯಾದರೂ ಗೋಷ್ಠಿಯಲ್ಲಿದ್ದ ಪ್ರತಿಷ್ಠಿತ ವಿದ್ವಾಂಸರು ತಮ್ಮ ಪಾಲುದಾರಿಕೆಯ ಅಗತ್ಯವನ್ನು ಮುಂದಾದರೂ ನಿಭಾಯಿಸುವ ಅಗತ್ಯದ ಬಗ್ಗೆ ಮಾತನಾಡಿಯಾರು ಎಂದು. ಇದು ನನ್ನ ಭ್ರಮೆ, ವಾಸ್ತವದ ದಟ್ಟ ಅರಿವಿದ್ದೂ ಕುಂದದಿರುವುದು ಹೆಣ್ಣಿನ ಅಕ್ಷಯ ಆಶಾವಾದ ಮಾತ್ರ ಎನ್ನುವುದು ಅಂದಿಗೂ ಇಂದಿಗೂ ಅರಿವಿಗೆ ಬರುತ್ತಲೇ ಇರುವ ಸತ್ಯ.

ವಸಾಹತುಶಾಹಿ ಸಂದರ್ಭದ ಬ್ರಿಟೀಷರೊಂದಿಗಿನ ಸಂಬಂಧವನ್ನು ಆಶೀಶ್ ನಂದಿ, 'ಆಪ್ತ ಶತ್ರು' ಎಂದು ಕರೆದು ಅದನ್ನು ವಿಶ್ಲೇಷಣೆ ಮಾಡಿದಾಗ, ದೇಶದ ಉದ್ದಗಲಕ್ಕೂ ಅದನ್ನು ಗಂಭೀರವಾಗಿ ಚರ್ಚಿಸಲಾಯಿತು. ಚರ್ಚೆಯ ಬಗೆಗೆ ಯಾರಿಗೂ ಆಕ್ಷೇಪಗಳಿಲ್ಲ. ಬ್ರಿಟೀಷರೊಂದಿಗಿನ ಭಾರತೀಯರ ವಿಷಮತೆ, ಅನಿವಾರ್ಯದೊಂದಿಗೇ ಇದ್ದ ಆಪ್ತತೆಯನ್ನೂ ಅದೆಷ್ಟು ವಿವರಗಳಲ್ಲಿ, ಸಾಂದ್ರವಾಗಿ ಸೂಕ್ಷ್ಮ ಒಳನೋಟಗಳೊಂದಿಗೆ ಆ ಕೃತಿ ಕಟ್ಟಿಕೊಡುತ್ತದೆ ಎನ್ನುವುದನ್ನು ಹೆಣ್ಣುಮಕ್ಕಳೂ ಒಪ್ಪುತ್ತೇವೆ. ಆ ಕೃತಿ, ಅದು ಎತ್ತುವ ಚರ್ಚೆಗಳು, ಕಾಣಿಸುವ ಸತ್ಯಗಳು 'ನಮ್ಮದು' ಎನ್ನಿಸುವಂತೆ, ಜೆಂಡರ್‌ನ ಅದಕ್ಕಿಂತಲೂ ಇನ್ನೂ ಅಧಿಕೃತ ಎನ್ನಿಸುವ ಆ ಕಾಲದಿಂದ ಈ ಕಾಲಕ್ಕೂ ಸತ್ಯಸ್ಯ ಸತ್ಯ ಎನ್ನಿಸುವ ಸಂಗತಿಗಳನ್ನು ಕುರಿತ ಚರ್ಚೆ ಯಾಕೆ 'ನಮ್ಮದು' ಎನ್ನಿಸುವುದಿಲ್ಲ? ಗಂಡಾಳಿಕೆಯ ನಿತ್ಯ ನಿರಂತರದ ದಾರುಣ ವಾಸ್ತವಗಳನ್ನು ಕುರಿತ ಚರ್ಚೆಗಳು ತೀರಾ ಕ್ವಚಿತ್ತಾಗಿ ಮಾತ್ರ ನಡೆಯುತ್ತವೆ. ಗಂಡಸರು ಸಾಮಾಜಿಕ, ಸಾಂಸ್ಕೃತಿಕ ವಾಸ್ತವಗಳನ್ನು ಕುರಿತು ಮಾತನಾಡುವುದನ್ನು ಅದೆಷ್ಟು ಹೆಮ್ಮೆಯಿಂದ, ತಲೆಯೆತ್ತಿ, 'ನೋಡಿ ನೋಡಿ' ಎನ್ನುವ ಧರ್ತಿಯಲ್ಲಿ ನಡೆಸುತ್ತಾ 'ಕ್ರಿಟಿಕಲ್ ಇನ್‌ಸೈಡರ್' ಎನ್ನುವ ಬಿರುದಿನೊಂದಿಗೆ ವಿರಾಜಮಾನರಾಗುತ್ತಾರೆ. ನಿಜದಲ್ಲಿ ಇದು ಜೆಂಡರ್ ಅನ್ನೂ ಒಳಗೊಳ್ಳಬೇಕು ಅನಿವಾರ್ಯವಾಗಿ. ಆದರೆ ಅದಾಗುವುದೂ ತೀರಾ ಅಪರೂಪಕ್ಕೆ. ಗಂಡಾಳಿಕೆಯನ್ನೋ, ಇದರಲ್ಲಿ ನಂಬಿಕೆಯಿಟ್ಟ ಗಂಡಸರನ್ನೋ ನಾವು 'ಆಪ್ತ ಶತ್ರು'ಗಳು ಎಂದು ಕರೆದ ಗಳಿಗೆಯಲ್ಲಿಯೇ ನಾವೇ ಶತ್ರುಗಳಾಗಿ ಬಿಡುತ್ತೇವೆ. ಅದಕ್ಕೇ ಹೆಣ್ಣನ್ನು ಕುರಿತು